ಅಸಲು ದಾವಾ ಸಂಖ್ಯೆ: **19/2016** ಡಿ.ಡಬ್ಲ್ಯೂ:- **2**

ದಿನಾಂಕಃ **16.07.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-

ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಅದರಲ್ಲಿ ಬಿಳಿ ಬಣ್ಣದ ಮನೆಯು ಲೋಕೇಶಪ್ಪ ಬಿನ್ ಹಾಲಪ್ಪರವರಿಗೆ ಸೇರಿದ್ದು ಸದರಿ ಮನೆಯ ಪಕ್ಕದಲ್ಲಿರುವ ಹಂಚಿನ ಮನೆಯಲ್ಲಿ ಒಂದು ಭಾಗದಲ್ಲಿ ಹಾಲಪ್ಪನ ಹೆಂಡತಿ ತಿಮ್ಮಮ್ಮ ಮತ್ತು ಇನ್ನೊಂದು ಭಾಗದಲ್ಲಿ ವಾದಿ ವಾಸವಾಗಿದ್ದಾರೆ. ಸದರಿ ಹಂಚಿನ ಮನೆಯ ಪಕ್ಕದಲ್ಲಿರುವ ಮನೆಯನ್ನು ನಾಗೇಂದ್ರಪ್ಪರವರು ಕಟ್ಟಿದ್ದಾರೆ ಸದರಿ ಜಾಗವು ರುದ್ರಪ್ಪ ಮತ್ತು ನಾಗೇಂದ್ರಪ್ಪರವರ ಜಂಟಿ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು ನಿಪಿ-11 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಮೊದಲಿಗೆ ಕಾಣುತ್ತಿರುವ ಆರ್ ಸಿ ಸಿ ಮನೆಯು ನಾಗೇಂದ್ರಪ್ಪ ಕಟ್ಟಿದ್ದಾರೆ ಸದರಿ ಜಾಗವು ರುದ್ರಪ್ಪ ಮತ್ತು ನಾಗೇಂದ್ರಪ್ಪರವರ ಜಂಟಿ ಹೆಸರಿನಲ್ಲಿರುತ್ತದೆ. ಸದರಿ ಮನೆಯ ಪಕ್ಕದಲ್ಲಿರುವ ಹಂಚಿನ ಮನೆಯ ಒಂದು ಭಾಗದಲ್ಲಿ ವಾದಿ, ಇನ್ನೊಂದು ಭಾಗದಲ್ಲಿ ತಿಮ್ಮಮ್ಮ ವಾಸವಾಗಿರುತ್ತಾರೆ. ಸದರಿ ಛಾಯಾಚಿತ್ರದಲ್ಲಿರುವ ಹಂಚಿನ ಮನೆಯು 5 ಅಂಕಣದ ಮನೆ ಎಂದರೆ ಸರಿಯಲ್ಲ. ಸದರಿ ಛಾಯಾಚಿತ್ರವನ್ನು ನಿಪಿ-12 ಎಂದು ಗುರುತಿಸಲಾಯಿತು. ಒಂದು ಛಾಯಾಚಿತ್ರದಲ್ಲಿ ಕಾಣುತ್ತಿರುವ ಹಂಚಿನ ಮನೆ ಮತ್ತು ಕಾಂಪೌಂಡ್ ತಿಮ್ಮಮ್ಮನಿಗೆ ಸೇರಿದ್ದಾಗಿರುತ್ತದೆ. ಸದರಿ ಛಾಯಾಚಿತ್ರವನ್ನು ನಿಪಿ-13 ಎಂದು ಗುರುತಿಸಲಾಯಿತು. ನಿಪಿ-13 ಛಾಯಾಚಿತ್ರದಲ್ಲಿ ಕಾಣುತ್ತಿರುವ ಹಂಚಿನ ಮನೆ ಮತ್ತು ಕಾಂಪೌಂಡ್ 5 ಅಂಕಣದ ಮನೆಯಲ್ಲಿ 2 ಅಂಕಣ ಮನೆ ಎಂದರೆ ಸರಿಯಲ್ಲ. ಕೆಂಪು ಹಂಚಿನ ಮನೆಯನ್ನು ಗಂಗಮ್ಮರವರು ತಮ್ಮ ಜೀವಿತಕಾಲದಲ್ಲಿ ಕಟ್ಟಿದ ಮನೆ

ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಜೀವಿತ ಕಾಲದಲ್ಲಿ ರುದ್ರಪ್ಪರವರು ಕಟ್ಟಿರುತ್ತಾರೆ. ಆದರೆ ಗಂಗಮ್ಮರವರು ಕಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಹಂಚಿನ ಮನೆಯನ್ನು 1965 ರಲ್ಲಿ ರುದ್ರಪ್ಪರವರು ಕಟ್ಟಿರುತ್ತಾರೆ. ಸದರಿ ಹಂಚಿನ ಮನೆಯನ್ನು 1965 ರಲ್ಲಿ ರುದ್ರಪ್ಪರವರು ಕಟ್ಟಿದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಹಂಚಿನ ಮನೆಯನ್ನು ಕಟ್ಟಿದ ನಂತರ ಹಾಲಪ್ಪ, ರುದ್ರಪ್ಪ ಮತ್ತು ನಾಗೇಂದ್ರಪ್ಪ ರವರು ಒಟ್ಟಾಗಿ ವಾಸವಾಗಿದ್ದಾರು ಎಂಬ ಪ್ರಶ್ನೆಗೆ ಸಾಕ್ಷಿಯು ನಾಗೇಂದ್ರಪ್ಪ ಮತ್ತು ಹಾಲಪ್ಪ ಮಾತ್ರ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಇಲ್ಲಿಯವರೆಗೂ ನಾಗೇಂದ್ರಪ್ಪ ಮತ್ತು ಹಾಲಪ್ಪ ಸದರಿ ಹಂಚಿನ ಮನೆಯಲ್ಲಿ ವಾಸವಾಗಿದ್ದಾರೆ. ಸದರಿ ಹಂಚಿನ ಮನೆಯನ್ನು 1965 ರ ನಂತರ ರುದ್ರಪ್ಪ ರವರು ನಾಗೇಂದ್ರಪ್ಪ ಮತ್ತು ಹಾಲಪ್ಪ ರವರಿಗೆ ಭಾಗ ಮಾಡಿಕೊಟ್ಟಿರುವ ಬಗ್ಗೆ ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಾಗೇಂದ್ರಪ್ಪ ಮತ್ತು ಹಾಲಪ್ಪರವರು ಸದರಿ ಹಂಚಿನ ಮನೆಯಲ್ಲಿ ವಾಸವಾಗಿರುವ ಬಗ್ಗೆ ಯಾವ ಆಧಾರದ ಮೇಲೆ ಹೇಳುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಕಂದಾಯ ಪಾವತಿ ಮಾಡಿದ ಬಗ್ಗೆ ಮತ್ತು ಕರೆಂಟ್ ಬಿಲ್ ಕಟ್ಟಿದ ಬಗ್ಗೆ ಮತ್ತು ಸದರಿಯವರಿಗೆ ಜಂಟಿಯಾಗಿ ಆಸ್ತಿ ಮಂಜೂರಾಗಿರುವ ಬಗ್ಗೆ ದಾಖಲೆಗಳ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.